ಜವಾಹರ್‌ಲಾಲ್ ನೆಹರು ತಾರಾಲಯ
ಬೆಂಗಳೂರು ಅಸೋಸಿಯೇಷನ್ ಫ಼ಾರ್ ಸೈನ್ಸ್ ಎಜುಕೇಷನ್
**Jawaharlal Nehru Planetarium**
*Bangalore Association for Science Education*
Bengaluru

# ಭಾರತೀಯ ಅಂತರಿಕ್ಷ ಯಾತ್ರೆ: ಸೌಂಡಿಂಗ್ ರಾಕೆಟ್ ಗಳಿಂದ ಗಗನಯಾನದವರೆಗೆ

## ಆಕಾಶ ಮಂದಿರ ಪ್ರದರ್ಶನದ ಸಾರಾಂಶ:

**’ಭಾರತೀಯ ಅಂತರಿಕ್ಷ ಯಾತ್ರೆ: ಸೌಂಡಿಂಗ್ ರಾಕೆಟ್ ಗಳಿಂದ** ಗಗನಯಾನದವರೆಗೆ’ ಎಂಬ ಆಕಾಶ ಪ್ರದರ್ಶನವು ಅಂತರಿಕ್ಷಯಾನವನ್ನು ಕೈಗೊಳ್ಳುವ ಮಾನವನ ಹಂಬಲ, ಅದು ಸಾಧ್ಯವಾದ ಬಗೆ, ಮುನ್ನಡೆ ಮತ್ತು ಜಾಗತಿಕ ಮಟ್ಟದಲ್ಲಿ ಇಂದು ಮಾನವಸಹಿತ ಅಂತರಿಕ್ಷಯಾನದ ಸ್ಥಿತಿ, ಈ ಬಗ್ಗೆ ಸಂಕ್ಷಿಪ್ತವಾಗಿ ಗಮನ ಹರಿಸುತ್ತದೆ.  ಇದರೊಂದಿಗೇ ಈ ಕಾರ್ಯಕ್ರಮವು ಭಾರತೀಯ ಅಂತರಿಕ್ಷ ಕಾರ್ಯಕ್ರಮದ ವಿಧ್ಯುಕ್ತವಾದ ಆರಂಭ, ವಿಕಾಸ ಹಾಗೂ ಸಾಧನೆಗಳನ್ನು ಕುರಿತಂತೆಯೂ ಮಾಹಿತಿ ನೀಡುತ್ತದೆ.  ಕೊನೆಯದಾಗಿ ಕಣ್ಮನ ತಣಿಸುವಂತಹ ದೃಶ್ಯಗಳ ನೆರವಿನೊಡನೆ ಇದು ಗಗನಯಾತ್ರಿಗಳ ತರಬೇತಿ, ದೈತ್ಯ ’ಎಚ್ ಎಲ್ ವಿ ಎಂ 3’ ಉಡಾವಣಾ ವಾಹನ ಹಾಗೂ ಗಗನಯಾನ ನೌಕೆ, ಉಡಾವಣಾ ಪೂರ್ವದಲ್ಲಿ ಅವುಗಳನ್ನು ಯಾನಕ್ಕೆ ಕ್ರಮಬದ್ಧವಾಗಿ ಸಿದ್ಧಗೊಳಿಸುವ ಬಗೆ, ಗಗನಯಾತ್ರಿಗಳು ನೌಕೆಯಲ್ಲಿ ಭೂಕಕ್ಷೆಯನ್ನು ಸೇರುವ, ಅಲ್ಲಿ ವಿಹರಿಸುವ ಮತ್ತು ಅಲ್ಲಿಂದ ಸುರಕ್ಷಿತವಾಗಿ ಹಿಂತಿರುಗುವ ಬಗೆ, ಇವುಗಳ ಬಗ್ಗೆಯೂ ದೃಶ್ಯ ಹಾಗೂ ವಿವರಣೆಯ ರೂಪದ ಮಾಹಿತಿಯನ್ನು ಒದಗಿಸುತ್ತದೆ.  ಗಗನಯಾನ ಕಾರ್ಯಕ್ರಮದ ವಿವಿಧ ಅಂಗಗಳನ್ನು, ಅವು ಕಾರ್ಯನಿರ್ವಹಿಸುವ ಬಗೆಯನ್ನು ಆ ಸಂಬಂಧದಲ್ಲಿನ ಅನಿಮೇಷನ್ ಗಳನ್ನು ಮನಮುಟ್ಟುವ ರೀತಿಯಲ್ಲಿ  ಆಕಾಶಗೋಲದ ಮೇಲೆ ಬಿಂಬಿಸುವುದು ಸುಮಾರು 30 ನಿಮಿಷಗಳ ಈ ಆಕಾಶ ಪ್ರದರ್ಶನದ ಮುಖ್ಯಾಂಶವಾಗಿದೆ. ಈ ರೋಮಾಂಚಕಾರಿಯಾದ ಆಕಾಶ ಪ್ರದರ್ಶನವನ್ನು ಇಸ್ರೋ ನಿರ್ಮಿಸಿದೆ.

# INDIAN SPACE ODYSSEY: SOUNDING ROCKETS TO GAGANYAAN

## Synopsis of the Sky Theatre Show:

This sky show **“Indian Space Odyssey: Sounding Rockets to Gaganyaan”** deliberates on such exciting subjects like the human thirst for spaceflight, its realisation, progress and the current status of human spaceflight at the global level.  It also traces the genesis and evolution of the Indian space program and its various achievements.  Finally, through a conspicuous visual treat, it discusses the training of astronauts, giant HLVM3 launch vehicle and the Gaganyaan spacecraft, their meticulous preparation for the launch and the way Indian astronauts will undertake their exciting journey to orbit in Gaganyaan spacecraft and safely return. Very impressive animations of the various elements of Gaganyaan projected onto the sky dome are the main highlight of this 30-minute sky show.  Indian Space Research Organisation has produced this exciting sky show.